ವಿಚಿತ್ರ ಪಾತ್ರಗಳೊಂದಿಗೆ ರಹಸ್ಯಮಯ ಕೃತಿಗಳನ್ನು ಓದುಗರಿಗೆ ನೀಡಿದರು. ಎನ್. ನರಸಿಂಹಯ್ಯ ಅವರು ಸಾಹಿತ್ಯಕ್ಕೆ ಅಪಾರ ಜನಪ್ರಿಯತೆ ಒದಗಿಸಿದರು. ಒಂದು ದೃಷ್ಟಿಯಲ್ಲಿ ಒಂದು ಸಾಹಿತ್ಯಿಕ ರೂಪವನ್ನು ಈ ಸಾಹಿತ್ಯಕ್ಕೆ ನೀಡಿದವರು ಟಿ.ಕೆ. ರಾಮರಾಯರು. ಕನ್ನಡದ ಜನಪ್ರಿಯ ವಾರ ಹಾಗೂ ಮಾಸ ಪತ್ರಿಕೆಗಳಲ್ಲಿ ಮೊತ್ತಮೊದಲು ಪ್ರಕಟಗೊಂಡ ಕತೆಗಳು, ಕಾದಂಬರಿಗಳು ಇವರದಾಗಿದ್ದವು. ಮುಂದೆ ದಿನಗಳೆದಂತೆ ಪತ್ರಿಕೆಗಳಿಗೆ ಪತ್ತೇದಾರಿ ಕೃತಿಗಳು ಅನಿವಾರ್ಯವಾದವು. ಟಿ.ಕೆ. ರಾಮರಾವ್, ಮನು, ವಿಜಯ ಸಾಸನೂರ, ಎಚ್.ಕೆ. ಅನಂತ ರಾವ್, ಸುದರ್ಶನ ದೇಸಾಯಿ ಮುಂತಾದವರ ಕೃತಿಗಳಿಗೆ ಅಪಾರ ಬೇಡಿಕೆ ಬಂದಿತು.

## ಪತ್ತೇದಾರಿ ಕಥಾತಂತ್ರ - ರಚನೆ ಇತ್ಯಾದಿ

1892ರಿಂದ ಇಲ್ಲಿಯವರೆಗೂ ಪತ್ತೇದಾರಿ ಸಾಹಿತ್ಯ ಸಾಗಿಬಂದಿರುವ ದಾರಿ ಅದ್ಭುತ, ರೋಮಾಂಚಕಾರಿ. ಕೆಲವೊಂದು ಸಂಕಷ್ಟಗಳನ್ನು ಎದುರಿಸಿ, ಕೆಲಕಾಲ ತನ್ನ ಸ್ವಯಂಕೃತ ಅಪರಾಧದಿಂದ ಓದುಗರ, ಜನರ ಅವಕೃಪೆಗೆ ಪಾತ್ರವಾದ ಇದು ಮುಂದೆ ಅಗ್ನಿಪಕ್ಷಿಯಂತೆ ಪುನರ್ಜನ್ಮ ಪಡೆದು ಮೆರೆದದ್ದು ಒಂದು ಪವಾಡ. ಕಾದಂಬರಿಯೊಂದಿಗೆ ಆರಂಭವಾದ ಇದಕ್ಕೆ ಭೀ.ಪ. ಕಾಳೆ, ಕೇಶವ ಮೊಕಾಶಿ, ಎಂ. ಜೀವನ, ಎಚ್ಚಾರ್ಕೆ, ಹ.ರಾ. ಕಿದಿಯೂರ, ಟಿ.ಕೆ. ರಾಮರಾವ್, ಕುಂದಾನಿ ಸತ್ಯನ್, ಸುದರ್ಶನ ದೇಸಾಯಿ, ವಿ.ಜಿ. ಕೃಷ್ಣಮೂರ್ತಿ ಮುಂತಾದವರು ತಮ್ಮ ಶ್ರೇಷ್ಠ ಸಣ್ಣಕತೆಗಳಿಂದ ಹೊಸ ಮೆರುಗು ನೀಡಿದರು. ಮುಂದೆ ಆರಂಭವಾದದ್ದು ಕಾದಂಬರಿಗಳ ಪರ್ವಕಾಲ. ಅಪಾರ ಜನಪ್ರಿಯತೆಯೊಂದಿಗೆ ಓದುಗರ ಒಂದು ವರ್ಗವನ್ನೇ ಸೃಷ್ಟಿಸಿದ ಶ್ರೇಯಸ್ಸು ಈ ಸಾಹಿತ್ಯಕ್ಕೆ ಸಲ್ಲುತ್ತದೆ.

ಅಪರಾಧದ ಹಿನ್ನೆಲೆಯಲ್ಲಿ ರಚಿತಗೊಳ್ಳುವ ಪತ್ತೇದಾರಿ ಕೃತಿ ರಚನೆ ಅಷ್ಟು ಸುಲಭವಲ್ಲ. ಕನ್ನಡ ಸಾಹಿತ್ಯದ ಇನ್ನಿತರ ಪ್ರಕಾರದ ಕತೆ, ಕಾದಂಬರಿಗಳ ರಚನೆಗಿಂತ ಇದು ಭಿನ್ನವಾಗಿರುವುದರಿಂದ ವಿಶೇಷ ಮಹತ್ವ ಹೊಂದಿದೆ. ಈ ಬಗೆಯ ಕೃತಿ ರಚಿಸುವ ಲೇಖಕನಿಗೆ ಕಾನೂನಿನ ಜ್ಞಾನ, ಅಪರಾಧಶಾಸ್ತ್ರ ಜ್ಞಾನ, ರಸಾಯನ ಶಾಸ್ತ್ರ, ವೈದ್ಯಶಾಸ್ತ್ರ, ಶವವಿಜ್ಞಾನ, ಮರಣೋತ್ತರ ಪರೀಕ್ಷಾ ಜ್ಞಾನ, ಮನೋವಿಜ್ಞಾನ ಮುಂತಾದವುಗಳ ತಿಳಿವಳಿಕೆ ಇರುವದು ಅವಶ್ಯವಿದೆ. ಇವೆಲ್ಲವುಗಳ ಹಿನ್ನೆಲೆಯಲ್ಲಿ ಕತೆಯ ಹಂದರ ಹೆಣೆಯುವ ಜಾಣ್ಮೆಯನ್ನು ಆತ ಪಡೆದವನಾಗಿರಬೇಕು.

ಪತ್ತೇದಾರಿ ಕತೆ, ಕಾದಂಬರಿಗಳ ಮೂಲ ಜೀವಾಳ ಕುತೂಹಲ, ರಹಸ್ಯ, ಕ್ಷಣಕ್ಷಣಕ್ಕೂ ನೀಡುವ ಹೊಸ ಅನಿರೀಕ್ಷಿತ ತಿರುವು, ಅದ್ಭುತ ತರ್ಕ ಹಾಗೂ ಕಲ್ಪನಾ ಶಕ್ತಿಗಳಾಗಿವೆ. ಲೇಖಕನಲ್ಲಿ ಇವೆಲ್ಲವುಗಳನ್ನು ಸಮಯೋಚಿತವಾಗಿ ಬಳಸಿಕೊಳ್ಳುವ ಜಾಣ್ಮೆ ಕರಗತವಾಗಿರಬೇಕು. ಆಗ ಅದೊಂದು ಅತ್ಯುತ್ತಮ ಕೃತಿಯಾಗುತ್ತದೆ. ಜೇಡ ತನ್ನ ಸುತ್ತ ಬಲೆ ಹೆಣೆಯುವಂತೆ ಲೇಖಕ ಪತ್ತೇದಾರಿ ಕೃತಿ ರಚಿಸಬೇಕಾಗುತ್ತದೆ. ಪುಟ ಪುಟದಲ್ಲಿ ಓದುಗರನ್ನು ಬೆಚ್ಚಿ ಬೀಳಿಸುತ್ತ, ಅವನ ವಿಚಾರಗಳನ್ನು ಬುಡಮೇಲು ಮಾಡುತ್ತ, ಒಂದು ಅರ್ಥದಲ್ಲಿ ಅವನನ್ನು 'ಮೂರ್ಖ'ನನ್ನಾಗಿಸುತ್ತ ಅದ್ಭುತ ಕಲ್ಪನಾ ಜಗತ್ತಿಗೆ ಕೊಂಡೊಯ್ದಾಗ ಓದುಗ ರೋಮಾಂಚಿತನಾಗುತ್ತಾನೆ. ವಿಚಿತ್ರ ಆನಂದ ಅನುಭವಿಸುತ್ತಾನೆ. ಇವಿಲ್ಲದಿದ್ದರೆ ಅದು ಒಂದು ಪತ್ತೇದಾರಿ ಕೃತಿಯಾಗಲಾರದು.

## ಸಾಹಿತ್ಯವೇಕಲ್ಲ?

ಈ ಬಗೆಯ ಧಾರ್ಮಿಕ, ಐತಿಹಾಸಿಕ, ಚಾರಿತ್ರಿಕ ಹಿನ್ನೆಲೆಯುಳ್ಳ ಪತ್ತೇದಾರಿ ಕೃತಿ ರಚಿಸುವುದು ಸುಲಭವಲ್ಲ. ಅದಕ್ಕಾಗಿ ಅನೇಕಾನೇಕ ವಿಷಯಗಳನ್ನು ತಿಳಿದುಕೊಂಡು ಅವುಗಳನ್ನು ಸೂತ್ರಬದ್ಧವಾದ ತತ್ವದಲ್ಲಿ ರಚಿಸಲ್ಪಟ್ಟ ಕೃತಿ ಸಾಮಾನ್ಯ ಕೃತಿಯಂತೂ ಆಗಲಾರದು. ಒಂದು ದೃಷ್ಟಿಯಿಂದ ಒಂದು ಒಳ್ಳೆಯ ಪತ್ತೇದಾರಿ ಕೃತಿ ಜ್ಞಾನದಾಯಕವೂ ಚೈತನ್ಯದಾಯಕವೂ ಆಗಿರುತ್ತದೆ. ಓದುಗರಿಗೆ ರಂಜನೆ ನೀಡುವುದರೊಂದಿಗೆ ನಿರ್ದಿಷ್ಟಗೊಳಿಸಲ್ಪಟ್ಟ ವಿಷಯಗಳ ಬಗ್ಗೆ ತಿಳಿವಳಿಕೆ ಅಥವಾ ಜ್ಞಾನವನ್ನೂ ನೀಡುತ್ತದೆ. ಕಥೆ ಓದಿ ಮುಗಿಸಿದ ನಂತರ ಅಷ್ಟೇ ಚೈತನ್ಯ ಹಾಗೂ ಸಮಯೋಚಿತವಾದ 'ಬುದ್ಧಿ' ನೀಡುವಲ್ಲಿ ಸಫಲವಾಗುತ್ತದೆ. ಸದಾ ಜಾಗೃತವಾಗಿರುವಂತೆ, ದುಷ್ಟಕೂಟದಿಂದ ದೂರವಿರುವಂತೆ ಎಚ್ಚರಿಸುತ್ತದೆ.

ಇಂಥ ಕೃತಿ ಸಾಹಿತ್ಯವೇಕಲ್ಲ?

ಇದು ಖಂಡಿತವಾಗಿಯೂ ಸಾಹಿತ್ಯವೇ...

ಆದರೂ ಪತ್ತೇದಾರಿ ಕೃತಿಗಳು ಸಾಹಿತ್ಯವೇ ಅಲ್ಲವೆಂದು ಹೇಳುವವರಿದ್ದಾರೆ. ಇಂತವರಿಂದಲೇ